**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ**

**ಸತ್ರ ಮೊಕದ್ದಮೆ ಸಂಖ್ಯೆಃ- 34/2024**

**ಪ್ರಾಸಾಃ- 1 ಚಾಸಾಃ- 1**

| | | |
|---|---|---|
| ಸಾಕ್ಷಿಯ ಹೆಸರು | : | ಪಾಂಡು |
| ತಂದೆಯ ಹೆಸರು | : | ಹೊನ್ನೂರಪ್ಪ |
| ವಯಸ್ಸು | : | 35 ವರ್ಷ |
| ವೃತ್ತಿ | : | ವ್ಯವಸಾಯ |
| ವಾಸಸ್ಥಳ | : | ಅಸುಂಡಿ |

**ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 1.8.2025**

**ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ**

ಚಾಸಾ 2 ಮತ್ತು 11 ರವರ ಪರಿಚಯ ಇದೆ. ಮೃತ ಲಕ್ಷ್ಮಿ ಪರಿಚಯ ಇದೆ. ಅವಳು ಈಗ ಜೀವಂತ ಇಲ್ಲ. ಆರೋಪಿ ಪರಿಚಯ ಇದೆ. ಈಗ ಸುಮಾರು ಒಂದೂವರೆ ವರ್ಷದ ಹಿಂದೆ ಪೋಲೀಸರು ನನ್ನನ್ನು ಮತ್ತು ಚಾಸಾ 2 ಈತನನ್ನು ಅಸುಂಡಿ ಗ್ರಾಮದ ರವಿ ಗೌಡರವರ ಹೊಲದ ಬಳಿ ಪಂಚನಾಮೆಗೆ ಕರೆದಿದ್ದರು. ಚಾಸಾ 11 ಆ ಸಮಯದಲ್ಲಿ ಹಾಜರು ಇದ್ದು ಆರೋಪಿಯು ಮೃತ ಲಕ್ಷ್ಮಿಗೆ ಕುಡಿಸಿದ ಸ್ಥಳವನ್ನು ತೋರಿಸಿದ್ದ ಸದರಿ ಸ್ಥಳದಲ್ಲಿ ಪೋಲೀಸರು ಪಂಚನಾಮೆಯನ್ನು ಮಾಡಿದ್ದರು. ನಾನು ಈಗ ನೋಡುತ್ತಿರುವ ಸದರಿ ಪಂಚನಾಮೆಯಲ್ಲಿ ನನ್ನ ಸಹಿ ಇದೆ. ಪಂಚನಾಮೆಯನ್ನು ನಿಪಿ-1 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಈಗ ನೋಡುತ್ತಿರುವ ನೋಟೀಸ್ ನಲ್ಲಿ ನನ್ನ ಸಹಿ ಇದೆ. ನೋಟೀಸ್ ನ್ನು ನಿಪಿ-2 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ನಾನು ಈಗ ನೋಡುತ್ತಿರುವ ಕಚ್ಚಾ ನಕಾಶೆಯಲ್ಲಿ ನನ್ನ ಸಹಿ ಇದೆ. ಕಚ್ಚಾ ನಕಾಶೆಯನ್ನು ನಿಪಿ-3 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ನಾನು ಈಗ ನೋಡುತ್ತಿರುವ 2 ಪೋಟೋಗಳಲ್ಲಿ ನಾನು ಇದ್ದೇನೆ. ಸದರಿ ಪೋಟೋಗಳನ್ನು ನಿಪಿ-4 ಮತ್ತು 5 ಎಂದು ಗುರುತಿಸಲಾಯಿತು. ಸದರಿ ಪೋಟೋಗಳನ್ನು ಪಂಚನಾಮೆ ಸಮಯದಲ್ಲಿ ತೆಗೆದಿದ್ದರು.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್ ಆರ್ ಎಸ್ ವಕೀಲರಿಂದಃ</u>**

ನನಗೆ ಓದಲು ಬರೆಯಲು ಬರುವುದಿಲ್ಲ. ಪಂಚನಾಮೆಗೆ ಬರುವಂತೆ ಹೇಳಿ ಪೋಲೀಸರು ನನಗೆ ನೋಟೀಸ್ ನ್ನು ಕೊಟ್ಟಿಲ್ಲ. ಪಂಚನಾಮೆಯಲ್ಲಿ, ನಕಾಶೆಯಲ್ಲಿ ಮತ್ತು ನೋಟೀಸ್‌ನಲ್ಲಿ ನಾನು ಪೋಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದೆ. ಪಂಚನಾಮೆಯಲ್ಲಿ ಬರೆದ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇಲ್ಲ. ಚಾಸಾ 11 ನನಗೆ ಸಂಬಂಧಿಕನಲ್ಲ. ಚಾಸಾ 11 ನನಗೆ ಯಾವುದೇ ವಿಚಾರವನ್ನು ಹೇಳಿಲ್ಲ ಮತ್ತು ನಾನೂ ಸಹ ಆತನನ್ನು ಯಾವುದೇ ವಿಚಾರವನ್ನು ಠಾಣೆಯಲ್ಲಿ ಕೇಳಿಲ್ಲ. ಪೋಟೋಗಳನ್ನು ಯಾವ ಕಾರಣಕ್ಕಾಗಿ ಪೋಲೀಸರು ತೆಗೆದಿದ್ದರು ಎಂದು ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವಂತೆ ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡದೇ ಇದ್ದರೂ ಸಹ ನಾನು ಪೋಲೀಸರ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).**

ಓ. ಹೇ. ಕೆ. ಸರಿ ಇದೆ.

**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ವಿಶೇಷ ನ್ಯಾಯಾಲಯ, ಬಳ್ಳಾರಿ.**

**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ**

**ಸತ್ರ ಮೊಕದ್ದಮೆ ಸಂಖ್ಯೆಃ- 34/2024**

**ಪ್ರಾಸಾಃ- 2 ಚಾಸಾಃ- 2**

| | | |
|---|---|---|
| ಸಾಕ್ಷಿಯ ಹೆಸರು | : | ಎರ್ರಿಸ್ವಾಮಿ |
| ತಂದೆಯ ಹೆಸರು | : | ಮಲ್ಲಯ್ಯ |
| ವಯಸ್ಸು | : | 33 ವರ್ಷ |
| ವೃತ್ತಿ | : | ವ್ಯವಸಾಯ |
| ವಾಸಸ್ಥಳ | : | ಅಸುಂಡಿ |

**ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 1.8.2025**

**ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ**

ಚಾಸಾ 1 ಮತ್ತು 11 ರವರ ಪರಿಚಯ ಇದೆ. ಮೃತ ಲಕ್ಷ್ಮಿ ಪರಿಚಯ ಇದೆ. ಅವಳು ಈಗ ಜೀವಂತ ಇಲ್ಲ. ಆರೋಪಿ ಪರಿಚಯ ಇದೆ. ಈಗ ಸುಮಾರು ಒಂದೂವರೆ ವರ್ಷದ ಹಿಂದೆ ಪೋಲೀಸರು ನನ್ನನ್ನು ಮತ್ತು ಚಾಸಾ 1 ಈತನನ್ನು ಅಸುಂಡಿ ಗ್ರಾಮದ ರವಿ ಗೌಡರವರ ಹೊಲದ ಬಳಿ ಪಂಚನಾಮೆಗೆ ಕರೆದಿದ್ದರು. ಚಾಸಾ 11 ಆ ಸಮಯದಲ್ಲಿ ಹಾಜರು ಇದ್ದು ಆರೋಪಿಯು ಮೃತ ಲಕ್ಷ್ಮಿಗೆ ಕುಡಿಸಿದ ಸ್ಥಳವನ್ನು ತೋರಿಸಿದ್ದ ಸದರಿ ಸ್ಥಳದಲ್ಲಿ ಪೋಲೀಸರು ಪಂಚನಾಮೆಯನ್ನು ಮಾಡಿದ್ದರು. ನಾನು ಈಗ ನೋಡುತ್ತಿರುವ ನಿಪಿ-1 ಪಂಚನಾಮೆಯಲ್ಲಿ ನನ್ನ ಸಹಿ ಇದೆ. ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಈಗ ನೋಡುತ್ತಿರುವ ನಿಪಿ-2 ನೋಟೀಸ್ ನಲ್ಲಿ ನನ್ನ ಸಹಿ ಇದೆ. ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ನಾನು ಈಗ ನೋಡುತ್ತಿರುವ ನಿಪಿ-3 ಕಚ್ಚಾ ನಕಾಶೆಯಲ್ಲಿ ನನ್ನ ಸಹಿ ಇದೆ. ಸಾಕ್ಷಿಯ ಸಹಿಯನ್ನು ನಿಪಿ-3(ಬಿ) ಎಂದು ಗುರುತಿಸಲಾಯಿತು. ನಾನು ಈಗ ನೋಡುತ್ತಿರುವ ನಿಪಿ-4 ಮತ್ತು 5 ಪೋಟೋಗಳಲ್ಲಿ ನಾನು ಇದ್ದೇನೆ. ಸದರಿ ಪೋಟೋಗಳನ್ನು ಪಂಚನಾಮೆ ಸಮಯದಲ್ಲಿ ತೆಗೆದಿದ್ದರು.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್ ಆರ್ ಎಸ್ ವಕೀಲರಿಂದಃ</u>**

ನನಗೆ ಓದಲು ಬರೆಯಲು ಬರುವುದಿಲ್ಲ. ಪಂಚನಾಮೆಗೆ ಬರುವಂತೆ ಹೇಳಿ ಪೋಲೀಸರು ನನಗೆ ನೋಟೀಸ್ ನ್ನು ಕೊಟ್ಟಿಲ್ಲ. ಪಂಚನಾಮೆಯಲ್ಲಿ, ನಕಾಶೆಯಲ್ಲಿ ಮತ್ತು ನೋಟೀಸ್‌ನಲ್ಲಿ ನಾನು ಕಾಲುವೆ ಹತ್ತಿರ ಸಹಿ ಮಾಡಿದ್ದೆ. ಪಂಚನಾಮೆಯಲ್ಲಿ ಬರೆದ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇಲ್ಲ. ಚಾಸಾ 11 ನನಗೆ ಸಂಬಂಧಿಕನಲ್ಲ. ಚಾಸಾ 11 ನನಗೆ ಯಾವುದೇ ವಿಚಾರವನ್ನು ಹೇಳಿಲ್ಲ ಮತ್ತು ನಾನೂ ಸಹ ಆತನನ್ನು ಯಾವುದೇ ವಿಚಾರವನ್ನು ಠಾಣೆಯಲ್ಲಿ ಕೇಳಿಲ್ಲ. ಪೋಟೋಗಳನ್ನು ಪಂಚನಾಮೆ ಸಬಂಧ ಪೋಲೀಸರು ತೆಗೆದಿದ್ದರು. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವಂತೆ ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡದೇ ಇದ್ದರೂ ಸಹ ನಾನು ಪೋಲೀಸರ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).**

ಓ. ಹೇ. ಕೆ. ಸರಿ ಇದೆ.

**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ವಿಶೇಷ ನ್ಯಾಯಾಲಯ, ಬಳ್ಳಾರಿ.**

**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ**

**ಸತ್ರ ಮೊಕದ್ದಮೆ ಸಂಖ್ಯೆಃ- 34/2024**

**ಪ್ರಾಸಾಃ- 3 ಚಾಸಾಃ- 3**

| | | |
|---|---|---|
| ಸಾಕ್ಷಿಯ ಹೆಸರು | : | ಷಣ್ಮುಖ |
| ತಂದೆಯ ಹೆಸರು | : | ಚಂದ್ರಾ ನಾಯಕ |
| ವಯಸ್ಸು | : | 38 ವರ್ಷ |
| ವೃತ್ತಿ | : | ಕೂಲಿ ಕೆಲಸ |
| ವಾಸಸ್ಥಳ | : | ಬಂಡಿಹಟ್ಟಿ |

**ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 1.8.2025**

**ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ**

ಚಾಸಾ 4 ರವರ ಪರಿಚಯ ಇದೆ. ಮೃತ ಲಕ್ಷ್ಮಿ ಪರಿಚಯ ಇಲ್ಲ. ದಿಃ 12-1-2024 ರಂದು ಪೋಲೀಸರು ನನ್ನನ್ನು ಮತ್ತು ಚಾಸಾ 4 ರವರನ್ನು ನೋಟೀಸ್ ನ್ನು ನೀಡಿ ಗ್ರಾಮೀಣ ಪೋಲೀಸ್ ಠಾಣೆಗೆ ಪಂಚರೆಂದು ಕರೆದಿದ್ದರು. ಅಲ್ಲಿ ಪೋಲೀಸರು ಯಾವುದೋ ವಸ್ತುವನ್ನು ಬಿಳಿ ಬಟ್ಟೆಯಲ್ಲಿ ಹಾಕಿ ಸೀಲ್ ಮಾಡಿ ನನ್ನ ಮೂರು ಸಹಿಗಳನ್ನು ತೆಗೆದುಕೊಂಡಿದ್ದರು. ನಾನು ಈಗ ನೋಡುತ್ತಿರುವ ಎರಡು ಪಂಚನಾಮೆಗಳಲ್ಲಿ ಮತ್ತು ನೋಟೀಸ್‌ನಲ್ಲಿ ನನ್ನ ಸಹಿಗಳು ಇವೆ. ಸದರಿ ದಾಖಲೆಗಳು ಮೃತ ಲಕ್ಷ್ಮಿಯ ಬಾಂಗಿಗಳ ಜಪ್ತು ಪಂಚನಾಮೆ, ಸ್ಟಮಕ್ ವಾಷ್ ಬಾಂಗಿ ಜಪ್ತು ಪಂಚನಾಮೆ ಮತ್ತು ಪೋಲೀಸ್ ನೋಟೀಸ್‌ಗಳು ಆಗಿದ್ದು ಅವುಗಳನ್ನು ಕ್ರಮವಾಗಿ ನಿಪಿ-6 ರಿಂದ 8 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಗಳನ್ನು ನಿಪಿ-6(ಎ) ರಿಂದ ನಿಪಿ-8(ಎ) ಎಂದು ಗುರುತಿಸಲಾಯಿತು. ಅದೇ ಸಮಯದಲ್ಲಿ ಪೋಲೀಸರು ನಾನು ಈಗ ನೋಡುತ್ತಿರುವ ಎರಡು ಪೋಟೋಗಳನ್ನು ತೆಗೆದಿದ್ದರು. ಪೋಟೋಗಳನ್ನು ನಿಪಿ-9 ಮತ್ತು 10 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಬೇಕೆಂದು ಮತ್ತು ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಪ್ರಾಜ್ಞ ಅಭಿಯೋಜಕರು ಕೋರಿದ್ದು, ಕೋರಿಕೆ ಸಕಾರಣಗಳಿಂದ ಕೂಡಿದ್ದರಿಂದ ಅದನ್ನು ಪುರಸ್ಕರಿಸಲಾಗಿದೆ ಮತ್ತು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲು ಮತ್ತು ಪಾಟೀ ಸವಾಲು ಮಾಡಲು ಪ್ರಾಜ್ಞ ಅಭಿಯೋಜಕರಿಗೆ ಅನುಮತಿ ನೀಡಲಾಯಿತು).**

**<u>ಪಾಟೀ ಸವಾಲುಃ ಅಭಿಯೋಜಕರವರಿಂದಃ</u>**

ನನ್ನನ್ನು ಪಂಚನಾಮೆ ಮಾಡಲು ಪಿ ಡಿ ಹಳ್ಳಿ ಪೋಲೀಸ್ ಠಾಣೆಯ ವೃತ್ತ ಕಚೇರಿಯಲ್ಲಿ ಪಂಚನಾಮೆಗೆ ಕರೆದಿದ್ದರು ಎಂದರೆ ಸರಿ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್ ಆರ್ ಎಸ್ ವಕೀಲರಿಂದಃ</u>**

ಪೋಲೀಸರು ಯವ ಯಾವ ವಸ್ತುಗಳನ್ನು ಠಾಣೆಯಲ್ಲಿ ಜಪ್ತು ಮಾಡಿಕೊಂಡಿದ್ದರು ಎಂದು ನನಗೆ ಗೊತ್ತಿಲ್ಲ. ಸದರಿ ವಸ್ತುಗಳು ಯಾರಿಗೆ ಸಂಬಂಧಪಟ್ಟಿದ್ದವು ಎಂದು ನನಗೆ ಗೊತ್ತಿಲ್ಲ. ಪೋಟೋಗಳನ್ನು ಯಾವ ಕಾರಣಕ್ಕೆ ತೆಗೆದಿದ್ದರು ಎಂದು ನನಗೆ ಮಾಹಿತಿ ಇಲ್ಲ. ನಿಪಿ-6 ಮತ್ತು 7 ಪಂಚನಾಮೆಯಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ. ಚಾಸಾ 17 ರವರು ನನಗೆ ಯಾವುದೇ ವಿಚಾರವನುನ ಹೇಳಿಲ್ಲ ನಾನು ಅವರಿಂದ ಯಾವುದೇ ವಿಚಾರವನ್ನು ಕೇಳಿಲ್ಲ. ಪಂಚನಾಮೆಯ ಬಗ್ಗೆ ನನಗೆ ಯಾುವುದೇ ಮಾಹಿತಿ ಇಲ್ಲದೇ ಇದ್ದರೂ ಸಹ ಪೋಲೀಸರ ಮಾತನ್ನು ಕೇಳಿಕೊಂಡು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ. ಪಂಚನಾಮೆಯ ಬಗ್ಗೆ ನನಗೆ ಮಾಹಿತಿ ಇಲ್ಲ.

ಮರು ವಿಚಾರಣೆ ಇಲ್ಲ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).**

ಓ. ಹೇ. ಕೆ. ಸರಿ ಇದೆ.

**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ವಿಶೇಷ ನ್ಯಾಯಾಲಯ, ಬಳ್ಳಾರಿ.**

**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ**

**ಸತ್ರ ಮೊಕದ್ದಮೆ ಸಂಖ್ಯೆಃ- 34/2024**

**ಪ್ರಾಸಾಃ- 4 ಚಾಸಾಃ- 4**

| | | |
|---|---|---|
| ಸಾಕ್ಷಿಯ ಹೆಸರು | : | ಜಗನ್ನಾಥ್ |
| ತಂದೆಯ ಹೆಸರು | : | ವಿ.ತಿಮ್ಮಣ್ಣ |
| ವಯಸ್ಸು | : | 31 ವರ್ಷ |
| ವೃತ್ತಿ | : | ಟೈಲ್ಸ್ ಕೆಲಸ |
| ವಾಸಸ್ಥಳ | : | ಬಂಡಿಹಟ್ಟಿ |

**ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 1.8.2025**

**ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ**

ಚಾಸಾ 3 ರವರ ಪರಿಚಯ ಇದೆ. ಮೃತ ಲಕ್ಷ್ಮಿ ಪರಿಚಯ ಇಲ್ಲ. ದಿಃ 12-1-2024 ರಂದು ಪೋಲೀಸರು ನನ್ನನ್ನು ಮತ್ತು ಚಾಸಾ 3 ರವರನ್ನು ನೋಟೀಸ್ ನ್ನು ನೀಡಿ ಗ್ರಾಮೀಣ ಪೋಲೀಸ್ ಠಾಣೆಗೆ ಪಂಚರೆಂದು ಕರೆದಿದ್ದರು. ಅಲ್ಲಿ ಪೋಲೀಸರು ಒಬ್ಬ ಹೆಣ್ಣು ಮಗಳಿಗೆ ಸಂಬಂಧ ಪಟ್ಟ 4 ವಸ್ತುಗಳನ್ನು ಬಿಳಿ ಬಟ್ಟೆಯಲ್ಲಿ ಹಾಕಿ ಸೀಲ್ ಮಾಡಿ ನನ್ನ ಮೂರು ಸಹಿಗಳನ್ನು ತೆಗೆದುಕೊಂಡಿದ್ದರು. ನಾನು ಈಗ ನೋಡುತ್ತಿರುವ ನಿಪಿ-6 ಮತ್ತು 7 ಪಂಚನಾಮೆಗಳಲ್ಲಿ ಮತ್ತು ನಿಪಿ-8 ನೋಟೀಸ್‌ನಲ್ಲಿ ನನ್ನ ಸಹಿಗಳು ಇವೆ. ಸಾಕ್ಷಿಯ ಸಹಿಗಳನ್ನು ನಿಪಿ-6(ಬಿ) ರಿಂದ ನಿಪಿ-8(ಬಿ) ಎಂದು ಗುರುತಿಸಲಾಯಿತು. ಅದೇ ಸಮಯದಲ್ಲಿ ಪೋಲೀಸರು ನಾನು ಈಗ ನೋಡುತ್ತಿರುವ ನಿಪಿ-9 ಮತ್ತು 10 ಪೋಟೋಗಳನ್ನು ತೆಗೆದಿದ್ದರು.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಬೇಕೆಂದು ಮತ್ತು ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಪ್ರಾಜ್ಞ ಅಭಿಯೋಜಕರು ಕೋರಿದ್ದು, ಕೋರಿಕೆ ಸಕಾರಣಗಳಿಂದ ಕೂಡಿದ್ದರಿಂದ ಅದನ್ನು ಪುರಸ್ಕರಿಸಲಾಗಿದೆ ಮತ್ತು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲು ಮತ್ತು ಪಾಟೀ ಸವಾಲು ಮಾಡಲು ಪ್ರಾಜ್ಞ ಅಭಿಯೋಜಕರಿಗೆ ಅನುಮತಿ ನೀಡಲಾಯಿತು).**

**<u>ಪಾಟೀ ಸವಾಲುಃ ಅಭಿಯೋಜಕರವರಿಂದಃ</u>**

ನನ್ನನ್ನು ಪಂಚನಾಮೆ ಮಾಡಲು ಪಿ ಡಿ ಹಳ್ಳಿ ಪೋಲೀಸ್ ಠಾಣೆಯ ವೃತ್ತ ಕಚೇರಿಯಲ್ಲಿ ಪಂಚನಾಮೆಗೆ ಕರೆದಿದ್ದರು ಎಂದರೆ ಸರಿ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್ ಆರ್ ಎಸ್ ವಕೀಲರಿಂದಃ</u>**

ಪೋಲೀಸರು ನನಗೆ ನೋಟೀಸ್ ನ್ನು ನೀಡಿ ಪಂಚನಾಮೆಗೆ ಕರೆದಿಲ್ಲ. ಪಂಚನಾಮೆಯಲ್ಲಿ ಬರೆದ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇಲ್ಲ. ಜಪ್ತು ಮಾಡಿಕೊಂಡಿದ್ದರು ಎಂದು ನಾನು ಹೇಳಿದಂತಹ ವಸ್ತುಗಳು ಯಾರಿಗೆ ಸಂಬಂಧಪಟ್ಟಿದ್ದವು ಎಂದು ಮತ್ತು ಸದರಿ ವಸ್ತುಗಳು ಏನು ಎಂದು ನನಗೆ ಗೊತ್ತಿಲ್ಲ. ಚಾಸಾ 17 ರವರನ್ನು ನಾನು ಯಾವುದೇ ವಿಚಾರವನ್ನು ಕೇಳಿಲ್ಲ ಮತ್ತು ಅವರೂ ಸಹ ನನಗೆ ಯಾವುದೇ ವಿಚಾರವನ್ನು ಹೇಳಿಲ್ಲ. ಪಂಚನಾಮೆಗಳಲ್ಲಿ ಬರೆದ ಅಂಶಗಳ ಬಗ್ಗೆ ನನಗೆ ಮಾಹಿತಿ ಇಲ್ಲ. ನನಗೆ ಪಂಚನಾಮೆಯ ಬಗ್ಗೆ ಯಾವುದೆ ಮಾಹಿತಿ ಇಲ್ಲದೇ ಇದ್ದರೂ ಸಹ ಪೋಲೀಸರ ಮಾತನ್ನು ಕೇಳಿಕೊಂಡು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).**

**ಓ. ಹೇ. ಕೆ. ಸರಿ ಇದೆ.**

**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ವಿಶೇಷ ನ್ಯಾಯಾಲಯ, ಬಳ್ಳಾರಿ.**

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ

ಸತ್ರ ಮೊಕದ್ದಮೆ ಸಂಖ್ಯೆಃ- 34/2024

**ಪ್ರಾಸಾಃ- 5 ಚಾಸಾಃ- 5**

| | | |
|---|---|---|
| ಸಾಕ್ಷಿಯ ಹೆಸರು | : | ಸರಸ್ವತಿ |
| ಗಂಡನ ಹೆಸರು | : | ಗಾಳಿಗ ಅಲಿಯಾಸ್ ಗಾಳೆಪ್ಪ |
| ವಯಸ್ಸು | : | 50 ವರ್ಷ |
| ವೃತ್ತಿ | : | ಹೊಲದ ಕೆಲಸ |
| ವಾಸಸ್ಥಳ | : | ಅಸುಂಡಿ |

**ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 1.8.2025**

**ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ**

ಚಾಸಾ 6 ರವರ ಪರಿಚಯ ಇದೆ. ಮೃತ ಲಕ್ಷ್ಮಿ ಪರಿಚಯ ಇದೆ. ಚಾಸಾ 7 ಮತ್ತು 8 ರವರ ಪರಿಚಯ ಇದೆ. ಲಕ್ಷ್ಮಿ ಈಗ ಜೀವಂತ ಇಲ್ಲ. ಅವಳು ಹೇಗೆ ಮರಣ ಹೊಂದಿದ್ದಳು ಎಂದು ನನಗೆ ಗೊತ್ತಿಲ್ಲ. ಈಗ ಸುಮಾರು ಒಂದೂವರೆ ವರ್ಷದ ಹಿಂದೆ ವಿಮ್ಸ್ ಆಸ್ಪತ್ರೆಗೆ ನಾನು ಹೋಗಿದ್ದ ಸಮಯದಲ್ಲಿ ಲಕ್ಷ್ಮಿಯ ಶವವನ್ನು ನೋಡಿದ್ದೆ. ಆ ಸಮಯದಲ್ಲಿ ಪೋಲೀಸರು ನಾನು ಈಗ ನೋಡುತ್ತಿರುವ ಶವ ಪಂಚನಾಮೆಯಲ್ಲಿ ಮತ್ತು ನೋಟೀಸ್‌ನಲ್ಲಿ ನನ್ನ ಸಹಿಗಳನ್ನು ಪಡೆದುಕೊಂಡಿದ್ದರು. ಶವ ಪಂಚನಾಮೆಯನ್ನು ನಿಪಿ-11 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-11(ಎ) ಎಂದು ಗುರುತಿಸಲಾಯಿತು. ನೋಟೀಸ್‌ನ್ನು ನಿಪಿ-12 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-12(ಎ) ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಬೇಕೆಂದು ಮತ್ತು ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಪ್ರಾಜ್ಞ ಅಭಿಯೋಜಕರು ಕೋರಿದ್ದು, ಕೋರಿಕೆ ಸಕಾರಣಗಳಿಂದ ಕೂಡಿದ್ದರಿಂದ ಅದನ್ನು ಪುರಸ್ಕರಿಸಲಾಗಿದೆ ಮತ್ತು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲು ಮತ್ತು ಪಾಟೀ ಸವಾಲು ಮಾಡಲು ಪ್ರಾಜ್ಞ ಅಭಿಯೋಜಕರಿಗೆ ಅನುಮತಿ ನೀಡಲಾಯಿತು).**

**<u>ಪಾಟೀ ಸವಾಲು: ಅಭಿಯೋಜಕರವರಿಂದ:</u>**

ಮೃತ ಲಕ್ಷ್ಮಿ ಮತ್ತು ಆರೋಪಿ ಒಬ್ಬರಿಗೊಬ್ಬರು ಸಂಬಂಧ ಇಟ್ಟುಕೊಂಡು ಜೀವನ ಮಾಡುತ್ತಿದ್ದರು ಎಂದರೆ ಸರಿ. ಆರೋಪಿ ಲಕ್ಷ್ಮಿಗೆ ವಿಷ ಕುಡಿಸಿ ಕೊಲೆ ಮಾಡಿ ಸಾಯಿಸಿದ್ದ ಎಂದರೆ ಸರಿ. ಆದ್ದರಿಂದ ನಾನು ಅವಳನ್ನು ನೊಡಲು ಆಸ್ಪತ್ರೆಗೆ ಹೋಗಿದ್ದೆ ಎಂದರೆ ಸರಿ. ಆಸ್ಪತ್ರೆಗೆಯಲ್ಲಿ ನಾನು ಮೃತಳ ಶವವನ್ನು ನೋಡಿ ಪೋಲೀಸರು ಮಾಡಿದ ಶವ ಪಂಚಾನಮೆಗೆ ಸಹಿ ಮಾಡಿದ್ದೆ ಎಂದರೆ ಸರಿ.

**<u>ಪಾಟೀ ಸವಾಲು: ಆರೋಪಿ ಪರ ಶ್ರೀ ಎಸ್ ಆರ್ ಎಸ್ ವಕೀಲರಿಂದ:</u>**

ನನಗೆ ಓದಲು ಬರೆಯಲು ಬರುವುದಿಲ್ಲ. ಪೋಲೀಸರು ನಿಪಿ-11 ಪಂಚನಾಮೆಯಲ್ಲಿ ಏನು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ಮೃತ ಲಕ್ಷ್ಮಿ ಆರೋಪಿಯ ಜೊತೆ ವಾಸ ಇದ್ದಳೋ ಇಲ್ಲವೋ ಎಂಬುದರ ಬಗ್ಗೆ ನನಗೆ ಗೊತ್ತಿಲ್ಲ. ಅವರಿಬ್ಬರು ಜೊತೆಗ ಇರುವುದನ್ನು ನಾನು ನೋಡಿಲ್ಲ. ಲಕ್ಷ್ಮಿ ಹೇಗೆ ಮತ್ತು ಯಾವ ರೀತಿಯಿಂದ ಮೃತ ಆಗಿದ್ದಳು ಎಂದು ನನಗೆ ಗೊತ್ತಿಲ್ಲ. ಈ ಪ್ರಕರಣದಲ್ಲಿ ಪೋಲೀಸರು ನನ್ನನ್ನು ಏನೂ ವಿಚಾರಣೆ ಮಾಡಿಲ್ಲ.

ಮರು ವಿಚಾರಣೆ ಇಲ್ಲ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).**

**ಓ. ಹೇ. ಕೆ. ಸರಿ ಇದೆ.**

**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ವಿಶೇಷ ನ್ಯಾಯಾಲಯ, ಬಳ್ಳಾರಿ.**